# ತುಮಕೂರು ವಿಶ್ವವಿದ್ಯಾನಿಲಯ,

ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಹೆಚ್. ರಸ್ತೆ, ತುಮಕೂರು-572103

ದೂರವಾಣಿ: 0816-2254546 0816-2255596, 0816-2255597 ಫ್ಯಾಕ್ಸ್ : 0816-2270719

**ಸಂಖ್ಯೆ: ತುವಿ:ಕಾ.ಅ.ಪ.: ಸಂಯೋಜನೆ:2025-26** 2473 **ದಿನಾಂಕ: 22.10.2024**

## ಸಂಯೋಜನಾ ಅಧಿಸೂಚನೆ

**ವಿಷಯ:** **ತುಮಕೂರು ವಿಶ್ವವಿದ್ಯಾನಿಲಯದ 2025-26ನೇ ಶೈಕ್ಷಣಿಕ ಸಾಲಿನ ಹೊಸ ಕಾಲೇಜು ಹಾಗೂ ವಿವಿಧ ಸಂಯೋಜನೆಗೆ UUCMS Online ತಂತ್ರಾಂಶದ ಮುಖಾಂತರ ಅರ್ಜಿಗಳನ್ನು ಆಹ್ವಾನಿಸಿರುವ ಕುರಿತು.**

ಉಲ್ಲೇಖ:
1. ಸರ್ಕಾರದ ಆದೇಶ ಸಂಖ್ಯೆ ಸಂ.ಇಡಿ 212 ಯುಎನ್‌ಇ 2024, ಬೆಂಗಳೂರು, ದಿನಾಂಕ: 04.10.2024
2. ಮಾನ್ಯ ಕುಲಪತಿಯವರ ಅನುಮೋದನೆ ದಿನಾಂಕ 10.10.2024

* * * * *

**2025-26ನೇ ಶೈಕ್ಷಣಿಕ ಸಾಲಿನ ಆನ್-ಲೈನ್ ಸಂಯೋಜನೆ ಕುರಿತಾಗಿ ಕೆಳಕಂಡ ಸರ್ಕಾರದ ಆದೇಶಗಳನ್ನು ಗಮನಕ್ಕೆ ತರಲಾಗಿದೆ.**

1) ಸರ್ಕಾರದ ಆದೇಶ ಸಂಖ್ಯೆ ಇಡಿ 34 egov 2020 ದಿನಾಂಕ 22.06.2020
2) ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 218 ಯುಎನ್‌ಇ 2020 ದಿನಾಂಕ 24.08.2020
3) ಸರ್ಕಾರದ ಆದೇಶ ಸಂಖ್ಯೆ ಇಡಿ 29 ಯುಎನ್‌ಇ 2021 ದಿನಾಂಕ 12.02.2021 ಮತ್ತು 16.02.2021
4) ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 384 ಯುಎನ್‌ಇ 2020 ದಿನಾಂಕ 18.02.2022
5) ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 119 ಯುಆರ್‌ಸಿ 2021 ದಿನಾಂಕ 23.07.2021
6) ಸರ್ಕಾರದ ಆದೇಶ ಸಂಖ್ಯೆ ಇಡಿ 34 egov (ಭಾಗ-2)2020 ದಿನಾಂಕ 26.04.2022
7) ಸರ್ಕಾರದ ಆದೇಶ ಸಂಖ್ಯೆ ಇಡಿ 47 ಯುಎನ್‌ಇ 2023, ಬೆಂಗಳೂರು, ದಿನಾಂಕ 05.04.2023
8) ಸರ್ಕಾರದ ಆದೇಶ ಸಂಖ್ಯೆ ಸಂ. ಇಡಿ 47 ಯುಎನ್‌ಇ 2023, ಬೆಂಗಳೂರು, ದಿನಾಂಕ: 10.11.2023

ಉಲ್ಲೇಖ (08)ರ ಸರ್ಕಾರದ ಆದೇಶದನ್ವಯ ಸಂಯೋಜನೆ ಪ್ರಕ್ರಿಯೆಯನ್ನು **University Unified College ManagementYsttem (UUCMS)** ತಂತ್ರಾಂಶದ ಮುಖಾಂತರವೇ ಕೈಗೊಳ್ಳಬೇಕಿರುತ್ತದೆ. ಈ ಸಂಬಂಧವಾಗಿ ಉಲ್ಲೇಖ (1)ರ ಸರ್ಕಾರದ ಆದೇಶದನ್ವಯ 2025-26ನೇ ಶೈಕ್ಷಣಿಕ ಸಾಲಿನ ಸಂಯೋಜನೆಗೆ **(UUCMS)** ತಂತ್ರಾಂಶದ ಮುಖಾಂತರವೇ ಕೈಗೊಳ್ಳಲು ಆನ್-ಲೈನ್ ಸಂಯೋಜನಾ ತಂತ್ರಾಂಶದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ತುಮಕೂರು ವಿಶ್ವವಿದ್ಯಾನಿಲಯದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಸಂಯೋಜಿತ ಕಾಲೇಜುಗಳು Opening New Colleges, Extension of existing affiliation, Continuation of affiliation, Permanent affiliation, Change / Addition of subject, Division of faculty, Increase of intake, Change of name, Change of Place, Closure and withdrawal of a college and Transfer of management ವಿವಿಧ ಸಂಯೋಜನೆಗಳಲ್ಲಿ ತಮ್ಮ ಕಾಲೇಜುಗಳಿಗೆ ಅವಶ್ಯಕವಾದ ಸಂಯೋಜನಾ ಪ್ರಸ್ತಾವನೆಯನ್ನು ಆನ್-ಲೈನ್ UUCMS ತಂತ್ರಾಂಶದ https://uucms.karnataka.gov.in /Login/Index ಮೂಲಕವೇ ಸಲ್ಲಿಸಿ, ಆನ್‌ಲೈನ್ ತಂತ್ರಾಶದಲ್ಲಿ Upload ಮಾಡುವ ಸಂಯೋಜನೆ ಪ್ರಸ್ತಾವನೆಯನ್ನು ಪೂರಕ ದಾಖಲೆಗಳೊಂದಿಗೆ 4 ಪ್ರತಿಗಳನ್ನು ಕುಲಸಚಿವರು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು-572 103 ಇವರ ಕಚೇರಿಗೆ ಸಲ್ಲಿಸುವುದು.

**(ಪು.ತಿ.ನೋ)**

**"ಹೊಸ ಕಾಲೇಜು ಪ್ರಾರಂಭಿಸಲು ಇಚ್ಛಿಸಿರುವ ನೊಂದಾಯಿಸಲ್ಪಟ್ಟ ಶೈಕ್ಷಣಿಕ ಸಂಘ-ಸಂಸ್ಥೆಗಳು ಈ ಅಧಿಸೂಚನೆಯೊಂದಿಗೆ ಲಗತ್ತಿಸಿರುವ ನಮೂನೆಯನ್ನು ಭರ್ತಿ ಮಾಡಿ, ಅಧಿಸೂಚನೆಯಲ್ಲಿ ವಿವರಿಸಿರುವ ಅಗತ್ಯ ದಾಖಲೆಗಳೊಂದಿಗೆ ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗಕ್ಕೆ ಭೇಟಿ ನೀಡಿ ಪ್ರಸ್ತಾವನೆ ಸಲ್ಲಿಸುವುದು. ಸದರಿ ಮಾಹಿತಿಯನ್ನು ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಸಲ್ಲಿಸಿ, ತದನಂತರದಲ್ಲಿ ನಿಯಮಾನುಸಾರವಿದ್ದಲ್ಲಿ ಸದರಿಯವರು ನೀಡುವ Login ID & Password ಪಡೆದು ತಮಗೆ ನೀಡಲಾಗುವುದು."**

**ಸಂಯೋಜನೆಗೆ ಸಂಬಂಧಿಸಿದ ಇತರೆ ಮಾಹಿತಿಗಳು:**

1) ಯಾವುದೇ ವಿವಿಧ ಸಂಯೋಜನೆಗೆ ಸಂಬಂಧಿಸಿದಂತೆ, ಕಾಲೇಜುಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಗಳಿಗೆ ಸರ್ಕಾರವು ಸೂಚಿಸಿರುವಂತೆ ಕನಿಷ್ಠ ಅಂಕಗಳು ಹಾಗೂ ಎಲ್ಲಾ ಮಾನದಂಡಗಳನ್ನು ಕಡ್ಡಾಯವಾಗಿ ಪೂರೈಸಬೇಕು. ಕಾಲೇಜುಗಳು ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿಗಳಿಗೆ ಸಂಬಂಧಿಸಿ ಸರ್ಕಾರವು ನಿಗದಿಪಡಿಸಿರುವ Score and Defined parameters ಪರಿಶೀಲಿಸಲು ಸೂಚಿಸಿದೆ.

2) ಈಗಾಗಲೇ ವಿಶ್ವವಿದ್ಯಾಲಯದಿಂದ ಸಂಯೋಜನೆ ಪಡೆದಿರುವ ಕಾಲೇಜುಗಳು ಸರ್ಕಾರವು ನಿಗದಿಪಡಿಸಿದ Score and Defined Parameters Criteria ನಲ್ಲಿ ನಿಗದಿಪಡಿಸಿದಂತೆ, ಎಲ್ಲ 8 ಮಾನದಂಡಗಳನ್ನು ಹಾಗೂ ಸಂಯೋಜನೆ ವಿಧದ ಅನುಸಾರ ಕನಿಷ್ಠ ಅಂಕಗಳನ್ನು ಹೊಂದುವುದು ಕಡ್ಡಾಯವಾಗಿದೆ. ಇಲ್ಲದೇ ಇದ್ದಲ್ಲಿ, ಸರ್ಕಾರದ ಆದೇಶ ಸಂಖ್ಯೆ: ಇಡಿ 29 ಯುಎನ್‌ಎ 2021, ಬೆಂಗಳೂರು, ದಿನಾಂಕ: 12.02.2021ರಂತೆ, ಕಾಲೇಜುಗಳ ಕೋರ್ಸುಗಳ ಪ್ರಥಮ ವರ್ಷ ಪ್ರವೇಶಾತಿಯನ್ನು ನಿಷಿದ್ಧಗೊಳಿಸಲಾಗುವುದು. ಅಂತಹ ಸಂದರ್ಭದಲ್ಲಿ ದ್ವಿತೀಯ ಹಾಗೂ ತೃತೀಯ ವಿದ್ಯಾರ್ಥಿಗಳು, ತಮ್ಮ ಅಂತಿಮ ಪದವಿ ತರಗತಿಗಳನ್ನು ಪೂರ್ಣಗೊಳಿಸುವವರೆಗೆ ಮಾತ್ರ ಆ ಕಾಲೇಜುಗಳನ್ನು ನಡೆಸಲು ಅವಕಾಶ ನೀಡಿ, ನಂತರ ಆ ಕಾಲೇಜುಗಳ ಸಂಯೋಜನೆಯನ್ನು ರದ್ದುಪಡಿಸಲಾಗುವುದು.

3) **ಸರ್ಕಾರಿ ಕಾಲೇಜುಗಳು ಹೊಸ ಸಂಯೋಜನೆಗಳ ಮಾಹಿತಿ, ಅವುಗಳ ಅಗತ್ಯತೆ ಮತ್ತು ಮಹಾವಿದ್ಯಾಲಯದಲ್ಲಿ ಹೊಸ ಸಂಯೋಜನೆಗಳಿಗೆ ಲಭ್ಯವಿರುವ ಶೈಕ್ಷಣಿಕ ಹಾಗೂ ಮೂಲಭೂತ ಸೌಲಭ್ಯಗಳ ಮಾಹಿತಿಯನ್ನು ಕಾಲೇಜು ಶಿಕ್ಷಣ ಆಯುಕ್ತರ ಮೂಲಕ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿ, ಅನುಮೋದನೆ ಪತ್ರದ ಪಡೆದ ನಂತರವಷ್ಟೇ, ಹೊಸದಾಗಿ ಕೋರ್ಸ್, ವಿಷಯ, ಇತ್ಯಾದಿ ಹೊಸ ಸಂಯೋಜನೆಗಳಿಗಾಗಿ ವಿಶ್ವವಿದ್ಯಾಲಯಕ್ಕೆ ಅರ್ಜಿ ಸಲ್ಲಿಸುವುದು. ಹೀಗೆ ಅರ್ಜಿ ಸಲ್ಲಿಸುವಾಗ ಕಾಲೇಜು ಶಿಕ್ಷಣ ಆಯುಕ್ತರ ಮೂಲಕ ಸರ್ಕಾರಕ್ಕೆ ತಾವು ಸಲ್ಲಿಸಿದ ಮನವಿ ಪತ್ರ ಹಾಗೂ ಸರ್ಕಾರವು ನೀಡಿರುವ ಅನುಮೋದನೆ ಪತ್ರದ ಪ್ರತಿಗಳನ್ನು ಅರ್ಜಿಯೊಂದಿಗೆ ವಿಶ್ವವಿದ್ಯಾನಿಲಯಕ್ಕೆ ಕಡ್ಡಾಯವಾಗಿ ಸಲ್ಲಿಸುವುದು. ಇಲ್ಲದಿದ್ದಲ್ಲಿ, ಅಂತಹ ಸಂಯೋಜನೆ ಕೋರಿಕೆಗಳನ್ನು ನೇರವಾಗಿ ತಿರಸ್ಕರಿಸಲಾಗುವುದು.**

4) ಎಂ.ಬಿ.ಎ, ಎಂ.ಸಿ.ಎ. ಬಿ.ಬಿ.ಎ ಹಾಗೂ ಬಿ.ಸಿ.ಎ ಕೋರ್ಸುಗಳಿಗೆ A.I.C.T.E ಯವರ ಮತ್ತು ಬಿ.ಇಡಿ/ಬಿ.ಪಿ.ಇಡಿ ಕಾಲೇಜು ಪ್ರಾರಂಭಿಸಲು ಇಚ್ಛಿಸುವ ನೋಂದಾಯಿತ ಸಂಸ್ಥೆಗಳು ಸಂಯೋಜನಾ ಅರ್ಜಿ ಸಲ್ಲಿಸುವ ಮೊದಲು ರಾಷ್ಟ್ರೀಯ ಶಿಕ್ಷಣ ಪರಿಷತ್ (ಎನ್.ಸಿ.ಟಿ.ಇ) ಅಥವಾ ಸಂಬಂಧಿಸಿದ ಇತರ ಸಕ್ಷಮ ಪ್ರಾಧಿಕಾರಗಳ ಪೂರ್ವಾನುಮೋದನೆಯನ್ನು ಕಡ್ಡಾಯವಾಗಿ ಪಡೆದಿರಬೇಕು.

5) Prof. Manish R. Joshi, Secretary of University Grants Commission, Ministry of Education, Govt. of India ಇವರ D.O. ಪತ್ರ ಸಂಖ್ಯೆ: 2-79/2023 (CPP-II), dated: 08-01-2024 ಯು.ಜಿ.ಸಿ. ಪತ್ರದನ್ವಯ BBA ಮತ್ತು BCA ಕಾರ್ಯಕ್ರಮಗಳು/ ಕೋರ್ಸುಗಳನ್ನು ನಡೆಸುತ್ತಿರುವ ಹಾಗೂ 2025-26ನೇ ಶೈಕ್ಷಣಿಕ ಸಾಲಿನಿಂದ ಹೊಸದಾಗಿ ಪ್ರಾರಂಭಿಸಲು ಉದ್ದೇಶಿಸಿರುವ ಎಲ್ಲಾ ಸಂಯೋಜಿತ ಶಿಕ್ಷಣ ಸಂಸ್ಥೆಗಳು AICTE ಮಾನ್ಯತೆಯನ್ನು ಕಡ್ಡಾಯವಾಗಿ ಪಡೆಯುವುದು.

6) ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 119 ಯುಆರ್‌ಸಿ 2021 ದಿನಾಂಕ 23.07.2021 ರನ್ವಯ ಸರ್ಕಾರಿ ಕಾಲೇಜುಗಳು ಹಾಗೂ ಅನುದಾನಿತ ಮತ್ತು ಅನುದಾನರಹಿತ ಕಾಲೇಜುಗಳು ಹೊಸದಾಗಿ ಶಾಶ್ವತ ಸಂಯೋಜನೆ / ಶಾಶ್ವತ ಸಂಯೋಜನೆ ನವೀಕರಣಕ್ಕೆ ಪ್ರಸ್ತಾವನೆ ಸಲ್ಲಿಸುವಾಗ ಕಾಲೇಜುಗಳು ಸರ್ಕಾರದ ಆದೇಶ ಸಂಖ್ಯೆ ಇಡಿ 29 ಯುಎನ್‌ಇ 2021 ದಿನಾಂಕ 12.02.2021ರಲ್ಲಿನ ಮಾರ್ಗಸೂಚಿಗಳನ್ನು ಪೂರೈಸಿದ್ದಲ್ಲಿ ಶಾಶ್ವತ ಸಂಯೋಜನೆ / ಶಾಶ್ವತ ಸಂಯೋಜನೆ ನವೀಕರಣ ಮಂಜೂರಾತಿ ಕೋರಿ ಅರ್ಜಿ ಸಲ್ಲಿಸಬಹುದು.

7) ಕನಿಷ್ಠ 5 ವರ್ಷಗಳ ಸಂಯೋಜನೆಯನ್ನು ಪೂರೈಸಿರುವ ಕಾಲೇಜುಗಳು ಸ್ನಾತಕೋತ್ತರ ಪದವಿ ಕೋರ್ಸುಗಳನ್ನು ಪ್ರಾರಂಭಿಸಲು ಉದ್ದೇಶಿಸಿದ್ದಲ್ಲಿ ಅಂತಹ ಸ್ನಾತಕೋತ್ತರ ಪದವಿ ಕೋರ್ಸಿಗೆ ಸಂಬಂಧಿಸಿದ ವಿಷಯದಲ್ಲಿ ಯು.ಜಿ.ಸಿ. ನಿಯಮಾನುಸಾರ 04 ಜನ ಅಧ್ಯಾಪಕರು ಅವರಲ್ಲಿ ಕನಿಷ್ಠ ಇಬ್ಬರು ಪಿಹೆಚ್.ಡಿ. ಪದವಿ ಹೊಂದಿದವರಾಗಿರಬೇಕು.

8) ಸಂಯೋಜಿತ ಕಾಲೇಜುಗಳು ನ್ಯಾಕ್ ಮಾನ್ಯತೆ ಪಡೆಯಲು ಅಗತ್ಯ ಕ್ರಮ ಕೈಗೊಳ್ಳುವುದು ಹಾಗೂ ನ್ಯಾಕ್ ಮಾನ್ಯತೆಯ ಅವಧಿ ಮುಕ್ತಾಯವಾಗಿರುವಂತಹ ಕಾಲೇಜುಗಳು ಮರು ಮಾನ್ಯತೆಗೆ ಅಗತ್ಯ ಕ್ರಮ ಕೈಗೊಂಡು ಮಾಹಿತಿಯನ್ನು ಅರ್ಜಿಯೊಂದಿಗೆ ಸಲ್ಲಿಸುವುದು.

9) ಹೊಸ ಕಾಲೇಜು ಪ್ರಾರಂಭಿಸಲು ಇಚ್ಛಿಸುವ ನೋಂದಾಯಿತ ಸಂಘ ಸಂಸ್ಥೆಗಳು ನವೀನ ಸಂಯೋಜನೆ ಮಂಜೂರಾತಿಗಾಗಿ ಅರ್ಜಿ ಸಲ್ಲಿಸಿ ಅರ್ಜಿಯೊಡನೆ ಈ ಕೆಳಕಂಡ ದಾಖಲಾತಿಗಳನ್ನು ತಪ್ಪದೇ ಲಗತ್ತಿಸತಕ್ಕದ್ದು.

   (i) ಹೊಸ ಕಾಲೇಜು ಪ್ರಾರಂಭ ಮಾಡಲು ಇಚ್ಛಿಸುವವರು ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 218 ಯುಎನ್‌ಇ 2020 ದಿನಾಂಕ 24.08.2020 ರ ಆದೇಶಾನುಸಾರ Natinonal Building Code-2016 ರ ನಿಯಮಾವಳಿಯನ್ವಯ ಕಾಲೇಜಿನ ಕಟ್ಟಡದ ಸುರಕ್ಷತೆ / ಸದೃಢತೆ ಕುರಿತು ಲೋಕೋಪಯೋಗಿ ಮತ್ತು ಅಗ್ನಿಶಾಮಕ ದಳ ಇಲಾಖೆಯಿಂದ ಪ್ರಮಾಣ ಪತ್ರಗಳನ್ನು ಕಡ್ಡಾಯವಾಗಿ ಪಡೆದು ಸಲ್ಲಿಸುವುದು. ಸದರಿ ಪ್ರಮಾಣ ಪತ್ರಗಳು ಇಲ್ಲದೆ ಸಲ್ಲಿಸುವ ಸಂಯೋಜನೆ ಅರ್ಜಿಯನ್ನು ಪರಿಗಣಿಸಲಾಗುವುದಿಲ್ಲ.

   (ii) ಸರ್ಕಾರದ ಸುತ್ತೋಲೆ ಸಂಖ್ಯೆ ಇಡಿ 384 ಯುಎನ್‌ಇ 2020 ದಿನಾಂಕ 18.02.2022 ರನ್ವಯ ಹೊಸ ಕಾಲೇಜು ಪ್ರಾರಂಭಿಸುವ ಸಂಸ್ಥೆಗಳು ಕೆಳಕಂಡಂತೆ ಜಮೀನಿನ ವಿಸ್ತೀರ್ಣತೆ ಹೊಂದಿರಬೇಕು.

| | |
|---|---|
| Located in mega cities | 0.5 acre |
| Corporation and District Head quarters | 1.0 acre |
| Municipalities or Taluk Head quarters | 1.5 acre |
| Any other rural areas | 3.0 acre |

(ಪು.ತಿ.ನೋ)

(iii) **ಹೊಸ ಕಾಲೇಜಿನ ಪ್ರಾರಂಭಕ್ಕೆ ಸಂಬಂಧಿಸಿದಂತೆ ಮೇಲ್ಕಾಣಿಸಿದ ಜಮೀನಿನ ಕುರಿತು ಪಹಣಿ ಅಥವಾ ಮುನ್ಸಿಪಾಲಿಟಿ/ ಕಾರ್ಪೋರೇಷನ್‌ಗಳಿಂದ ಪಡೆದ ಇತ್ತೀಚಿನ ಖಾತಾ ನಕಲು ಅಥವಾ ಸದರಿ ಜಮೀನಿನನ್ನು ಸಂಸ್ಥೆಯ/ ಕಾಲೇಜಿನ ಹೆಸರಿಗೆ ಪಡೆದುಕೊಂಡಿರುವ ಬಗ್ಗೆ ಸಬ್ ರಿಜಿಸ್ಟ್ರಾರ್ ಕಛೇರಿಯಲ್ಲಿ ನೊಂದಾಯಿತ ಆಗಿರುವ ಕ್ರಯ ಪತ್ರ ಅಥವಾ 30 ವರ್ಷಗಳಿಂದ ಕಡಿಮೆ ಇಲ್ಲದ ಅವಧಿಯ ಲೀಜ್ ಡೀಡ್ ಅಥವಾ ದಾನಪತ್ರದ ನಕಲು ಪ್ರತಿಗಳನ್ನು ಹಾಜರುಪಡಿಸುವುದು.**

(iv) ಯು.ಜಿ.ಸಿ ಯ ಸಂಯೋಜನೆ ಪರಿನಿಯಮಾವಳಿಯನ್ವಯ ನಿಗದಿತ ಠೇವಣಿ/ ಕಟ್ಟಡಗಳ ಸೌಲಭ್ಯ/ ಸಂಸ್ಥೆಯ ಹಣಕಾಸಿನ ವಿವರಗಳ ಮಾಹಿತಿಯೊಂದಿಗೆ ಪ್ರಸ್ತಾವನೆ ಸಲ್ಲಿಸುವುದು ಹಾಗೂ ಇನ್ನಿತರೆ ಮಾನದಂಡಗಳನ್ನು ಹೊಂದಿರಬೇಕು.

**(ಈ ಕುರಿತು ಸಂಯೋಜನಾ ಪರಿನಿಯಮಾವಳಿಯಲ್ಲಿನ ಮಾಹಿತಿಗೆ ಅನುಗುಣವಾಗಿ ಸಂಯೋಜನೆ ಅರ್ಜಿ ಸಲ್ಲಿಸುವುದು)**

(v) ಹೊಸ ಕಾಲೇಜುಗಳ ಪ್ರಾರಂಭಿಸುವ ಕಾಲೇಜುಗಳಲ್ಲಿ ತರಗತಿ, ಕಚೇರಿ ಕಾರ್ಯಾಲಯ, ಗ್ರಂಥಾಲಯ, ಆಟದ ಮೈದಾನ, ಕುಡಿಯುವ ನೀರಿನ ವ್ಯವಸ್ಥೆ, ಶೌಚಾಲಯ ಸೇರಿದಂತೆ ಕಾಲೇಜುಗಳನ್ನು ನಡೆಸಲು ಅಗತ್ಯವಿರುವ ಎಲ್ಲ ಮೂಲಭೂತ ಸೌಲಭ್ಯಗಳನ್ನು ಹೊಂದಿರತಕ್ಕದ್ದು. ಪ್ರಾರಂಭಿಸಲು ಇಚ್ಚಿಸಿರುವ ಕೋರ್ಸುಗಳಿಗೆ ಅನುಗುಣವಾಗಿ ಗ್ರಂಥಾಲಯ ವ್ಯವಸ್ಥೆ, / ಗಣಕಯಂತ್ರ ಸೇರಿದಂತೆ ಅಗತ್ಯವಾಗಿರುವ ಇನ್ನಿತರ ಪ್ರಯೋಗಾಲಯಗಳ ವ್ಯವಸ್ಥೆ ಹೊಂದಿರಬೇಕು ಹಾಗೂ ಪಠ್ಯಕ್ರಮದನ್ವಯ ಪ್ರಯೋಗಾಲಯಗಳ ಸಿದ್ಧತೆ ಮಾಡಿಕೊಂಡಿರಬೇಕು.

(vi) ಸಂಸ್ಥೆಯು ಹೊಂದಿರುವ ಜಮೀನಿನ ವಿಸ್ತೀರ್ಣವನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

(vii) ವಿದ್ಯಾಸಂಸ್ಥೆಯ ನೋಂದಣಿ ಪತ್ರದ ದೃಢೀಕೃತ ಪ್ರತಿ.

(viii) ಮೆಮೊರಾಂಡಮ್ ಮತ್ತು ಆರ್ಟಿಕಲ್ಸ್ ಆಫ್ ಅಸೋಸಿಯೇಷನ್, ರೂಲ್ಸ್, ರೆಗ್ಯುಲೇಶನ್ಸ್ ಮತ್ತು ಬೈಲಾ ಪ್ರತಿ.

(ix) ಟ್ರಸ್ಟ್ ಆಗಿದ್ದರೆ, ಆ ಟ್ರಸ್ಟ್ ಡೀಡ್‌ನ ಒಂದು ಪ್ರತಿ ಹಾಗೂ ಸಂಬಂಧಪಟ್ಟ ಕಾಯಿದೆಯಡಿಯಲ್ಲಿ ನೋಂದಣಿಯಾಗಿರುವುದಕ್ಕೆ ದೃಢೀಕೃತ ಪ್ರತಿ ಮತ್ತು ಶೈಕ್ಷಣಿಕ ಉಪಯೋಗಕ್ಕೆ ಸಂಬಂಧಪಟ್ಟಂತೆ ಟ್ರಸ್ಟ್‌ನಲ್ಲಿ ತೆಗೆದುಕೊಂಡ ನಿರ್ಣಯದ ಪ್ರತಿ.

(x) ಸೊಸೈಟಿ / ಟ್ರಸ್ಟ್ ಪ್ರಸಕ್ತ ಸಾಲಿನ ಲೆಕ್ಕಗಳ ಆಡಿಟ್ ವರದಿಯ ಪ್ರತಿ.

(xi) ಕಾಲೇಜಿನ ಲೆಕ್ಕ ಪತ್ರಗಳ ಆಡಿಟ್ ವರದಿ ಪ್ರತಿ.

(xii) ಹಿಂದಿನ ವರ್ಷದ ವಾರ್ಷಿಕ ವರದಿಯ ಪ್ರತಿ.

(xiii) ಉದ್ದೇಶಿತ ಕಾಲೇಜಿನ ಸ್ಥಾಪನೆಗೆ ನಿಗದಿಪಡಿಸಿರುವ ಸ್ಥಳ ಮತ್ತು ಅದರ ಸೂಕ್ತತೆ, ವಿವಾದ ಮುಕ್ತವಾಗಿರುವ ಬಗೆಗೆ ಮುಚ್ಚಳಿಕೆ ಪ್ರತಿ.

(xiv) ಉದ್ದೇಶಿತ ಕಾಲೇಜು ರೂ. 100 ರ ಛಾಪ ಕಾಗದಲ್ಲಿ ವಿಶ್ವವಿದ್ಯಾಲಯವು ಕಾಲಕಾಲಕ್ಕೆ ರಚಿಸುವ ಅಧಿನಿಯಮ (Act), ಪರಿನಿಯಮ/ಶಾಸನ (Statutes); ವಿನಿಯಮ (Regulations), ಆಧ್ಯಾದೇಶ (Ordinance), ನಿಯಮ (Rules) ಮತ್ತು ನಿರ್ದೇಶನಗಳಿಗೆ ಬದ್ಧರಾಗಿರುವುದಾಗಿ ತಿಳಿಸುವ ಅಧ್ಯಕ್ಷರು/ ಕಾರ್ಯದರ್ಶಿ ಹಾಗೂ ಪ್ರಾಂಶುಪಾಲರು ಸಹಿ ಇರುವ ಮುಚ್ಚಳಿಕೆ ಪತ್ರ (Undertaking) ವನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಸಲ್ಲಿಸಬೇಕು.

(xv) ಮುಚ್ಚಳಿಕೆ ಪತ್ರವನ್ನು ಅರ್ಜಿಯೊಂದಿಗೆ ಸಲ್ಲಿಸತಕ್ಕದ್ದು.

**(ಪು.ತಿ.ನೋ)**

10) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಆಡಳಿತ ಮಂಡಳಿಯವರು ನಡೆಸುವ ಕಾಲೇಜುಗಳು ನಿಗದಿತ ಸಂಯೋಜನಾ ಶುಲ್ಕದಲ್ಲಿ ಶೇಕಡಾ 50% ರಷ್ಟು ಮಾತ್ರ ಪಾವತಿಸಬಹುದಾಗಿದೆ. ಇದಕ್ಕೆ ಪೂರಕವಾಗಿ ಸಂಬಂಧಿಸಿದ ಇಲಾಖೆಯಿಂದ ಪಡೆದಿರುವ ಪ್ರಮಾಣ ಪತ್ರವನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಅಂತಹ ಪ್ರಮಾಣ ಪತ್ರ ಸಲ್ಲಿಸದಿದ್ದಲ್ಲಿ ಶೇ. 50% ರ ವಿನಾಯಿತಿಗೆ ಪರಿಗಣಿಸಲಾಗುವುದಿಲ್ಲ.

11) ಸಂಯೋಜನೆಗೆ ಸಂಬಂಧಿಸಿದಂತೆ ಯು.ಜಿ.ಸಿ., ರಾಜ್ಯ ಸರ್ಕಾರ ಹಾಗೂ ವಿಶ್ವವಿದ್ಯಾನಿಲಯಗಳು ಕಾಲಕಾಲಕ್ಕೆ ಹೊರಡಿಸುವ ನೀತಿ ಸಂಹಿತೆಗಳನ್ನು/ನಿಯಮಾವಳಿಗಳನ್ನು ಕಡ್ಡಾಯವಾಗಿ ಪಾಲಿಸಬೇಕು.

12) ಸಂಯೋಜನೆ ಅರ್ಜಿಯನ್ನು ಈ ಕೆಳಕಂಡ ದಿನಾಂಕಗಳ ಒಳಗಾಗಿ ಸಲ್ಲಿಸುವುದು.

| | |
|---|---|
| ಅರ್ಜಿ ಸಲ್ಲಿಸಲು ಪ್ರಾರಂಭದ ದಿನಾಂಕ | **25.10.2024** |
| **UUCMS** ತಂತ್ರಾಂಶದ ಮೂಲಕ ದಂಡಶುಲ್ಕವಿಲ್ಲದೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | **05.11.2024** |
| ರೂ. 12,980/- ದಂಡಶುಲ್ಕದೊಡನೆ UUCMS ತಂತ್ರಾಂಶದ ಮೂಲಕ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ | **11.11.2024** |
| **UUCMS** ತಂತ್ರಾಂಶದ ಮೂಲಕ ಭರ್ತಿ ಮಾಡಿದ ಪ್ರಸ್ತಾವನೆಗಳನ್ನು ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸುವ ದಿನಾಂಕ | **12.11.2024** |
| ಸ್ಥಳೀಯ ವಿಚಾರಣಾ ಸಮಿತಿಗಳು ಕಾಲೇಜುಗಳಿಗೆ ಭೇಟಿ ನೀಡುವ ಅವಧಿ | **15.11.2024** ರಿಂದ **11.12.2024** |
| ಹೊಸ ಕಾಲೇಜು ಪ್ರಾರಂಭಿಸುವವರು ನಿಗದಿತ ನಮೂನೆ ಮತ್ತು ಅಗತ್ಯ ದಾಖಲೆಯೊಂದಿಗೆ ಕಾಲೇಜು ಅಭಿವೃದ್ಧಿ ಪರಿಷತ್ ವಿಭಾಗಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಲು ಕೊನೆಯ ದಿನಾಂಕ | **28.10.2024** |

13) UUCMS ಆನ್-ಲೈನ್ ಸಂಯೋಜನೆಗೆ ಸಂಬಂಧಿಸಿದ ಸರ್ಕಾರದ ಆದೇಶ/ ಇತರೆ ಆದೇಶಗಳು, ಸುತ್ತೋಲೆಗಳು, ಸಂಯೋಜನಾ ಶುಲ್ಕಗಳ ಮಾಹಿತಿ, ಸಂಯೋಜನೆಗೆ ಸಂಬಂಧಿಸಿದ ಸೂಚನೆ ಹಾಗೂ ಇತರೆ ಮಾಹಿತಿಗಳನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ www.tumkuruniversity.ac.in ಇಂದ ಪಡೆಯಬಹುದಾಗಿದೆ. ವೆಬ್‌ಸೈಟ್‌ನಲ್ಲಿ ನೀಡಿದ ಅಧಿಸೂಚನೆಯ ಎಲ್ಲಾ ಮಾಹಿತಿಯು ತಿದ್ದುಪಡಿಗೊಳಪಟ್ಟಿರುತ್ತದೆ.

14) ಕಳೆದ ಮೂರು ಶೈಕ್ಷಣಿಕ ವರ್ಷಗಳ ಅವಧಿಯ ಸಂಯೋಜನಾ ಆದೇಶ ಮತ್ತು ಸ್ಥಳೀಯ ವಿಚಾರಣಾ ಸಮಿತಿಗಳು ವಿಧಿಸಿರುವ ಷರತ್ತುಗಳನ್ನು ಪಾಲಿಸಿರುವ ಅನುಪಾಲನಾ ವರದಿಗಳನ್ನು ಕಡ್ಡಾಯವಾಗಿ ಅರ್ಜಿಯೊಂದಿಗೆ ಲಗತ್ತಿಸುವುದು.

15) ಕಾಲೇಜಿನ ನ್ಯಾಕ್ ಮಾನ್ಯತೆ, ಯುಜಿಸಿ ಕಾಯ್ದೆಯ ಸೆಕ್ಷನ್ 2(f), 12(B) ರಡಿಯಲ್ಲಿ ಮಾನ್ಯತೆ ಹೊಂದಿದ ಪ್ರಮಾಣ ಪತ್ರಗಳನ್ನು ಅರ್ಜಿ ಜೊತೆಯಲ್ಲಿ ಕಡ್ಡಾಯವಾಗಿ ಲಗತ್ತಿಸಿರಬೇಕು.

16) ಕಾಲೇಜಿನ ಶಾಶ್ವತ ಸಂಯೋಜನೆಗೆ ಅರ್ಜಿ ಸಲ್ಲಿಸುವಾಗ, ಕಳೆದ ಐದು ಶೈಕ್ಷಣಿಕ ವರ್ಷಗಳ ಅವಧಿಯ ಸಂಯೋಜನಾ ಆದೇಶಗಳನ್ನು ಲಗತ್ತಿಸಿರುಬೇಕು.

**ವಿಶೇಷ ಸೂಚನೆ:**

1. ಕಾಲೇಜುಗಳು ಈಗಾಗಲೇ ಸಂಯೋಜನೆ ಮಾನ್ಯತೆ ಹೊಂದಿರುವ ಪದವಿಗಳಿಗೆ ಯು.ಯು.ಸಿ.ಎಂ.ಎಸ್.ನ **College Admin Login** ನಲ್ಲಿ **request** ಸಂಯೋಜನೆ ಪ್ರತಿಯೊಂದಿಗೆ **CDC** ಗೆ **request** ಕಳುಹಿಸುವುದು. ತಾವು ಕೋರಿರುವ ಕೋರ್ಸಿನ ಸಂಯೋಜನೆ ಮತ್ತು ಪ್ರವೇಶಮಿತಿಯು ಸರಿಯಾಗಿದ್ದಲ್ಲಿ ವಿಶ್ವವಿದ್ಯಾನಿಲಯದ **CDC login** ನಲ್ಲಿ ಅನುಮೋದನೆ ನೀಡಲಾಗುವುದು. ಅನುಮತಿ ದೊರೆತ ನಂತರ ಸಂಯೋಜನೆಯ ಮುಂದಿನ ಪ್ರಕ್ರಿಯೆ ಕೈಗೊಳ್ಳುವುದು.

2. 2025-26ನೇ ಶೈಕ್ಷಣಿಕ ಸಾಲಿನ ಸಂಯೋಜನೆ ಪ್ರಸ್ತಾವನೆ ಸಲ್ಲಿಸುವ ಪ್ರಕ್ರಿಯೆ ಹಾಗೂ ಸಂಯೋಜನಾ ಶುಲ್ಕದ ಪಾವತಿಯು ಅನ್‌ಲೈನ್ ಮುಖಾಂತರವೇ ಪಾವತಿಸುವುದರಿಂದ ಅನ್ ಲೈನ್ ಮೂಲಕ **Final Submit** ಮಾಡಿದ ನಂತರದಲ್ಲಿ ಕೋರ್ಸು / ಪ್ರವೇಶಮಿತಿ ಇತರೆ ವಿವಿಧ ರೀತಿಯ ಸಂಯೋಜನೆಯ ಪ್ರಕಾರಗಳ ಬದಲಾವಣೆಗೆ ಹಾಗೂ ಶುಲ್ಕದ ಪಾವತಿ / ಮರುಪಾವತಿಗೆ ಅವಕಾಶ ಇರುವುದಿಲ್ಲ. ಈ ಕಾರಣದಿಂದಾಗಿ ಸಂಯೋಜಿತ ಕಾಲೇಜುಗಳು ಆನ್-ಲೈನ್ ಮುಖಾಂತರ ಸಂಯೋಜನೆಗೆ ಪ್ರಸ್ತಾವನೆ ಸಲ್ಲಿಸುವಾಗ ತಮ್ಮ ಕಾಲೇಜುಗಳಲ್ಲಿರುವ ಕೋರ್ಸುಗಳು ಹಾಗೂ ಸಂಯೋಜನೆಯ ಪ್ರಕಾರವನ್ನು **(Type of affiliation)** ಹಾಗೂ ಇನ್ನಿತರೆ ಎಲ್ಲಾ ಅಂಶಗಳನ್ನು ತಂತ್ರಾಂಶದಲ್ಲಿ ತಪ್ಪದೇ ಸರಿಯಾಗಿ ಭರ್ತಿ ಮಾಡಿ ಪ್ರಸ್ತಾವನೆಯನ್ನು ಸಲ್ಲಿಸುವುದು. ಒಂದು ವೇಳೆ ಸರಿಯಾಗಿ ಭರ್ತಿ ಮಾಡದಿದ್ದಲ್ಲಿ, ಸಂಯೋಜನಾ ಮಂಜೂರಾತಿಯಲ್ಲಿ ಆಗುವ ಲೋಪಗಳಿಗೆ ಕಾಲೇಜಿನ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತೀರಿ.
3. ಸಂಯೋಜನೆಗೆ ಸಂಬಂಧಿಸಿದ ವೇಳಾಪಟ್ಟಿಯಲ್ಲಿ ಬದಲಾವಣೆಯಾದರೆ ಮಾಹಿತಿಯನ್ನು **www.tumkuruniversity.ac.in** ನಲ್ಲಿ ಪ್ರಕಟಿಸಲಾಗುವುದು.

ಕುಲಸಚಿವರು

ಕುಲಸಚಿವರು
ತುಮಕೂರು ವಿಶ್ವವಿದ್ಯಾನಿಲಯ
ತುಮಕೂರು

ಗೆ,

**ಪ್ರಾಂಶುಪಾಲರು, ವಿಶ್ವವಿದ್ಯಾನಿಲಯದ ಎಲ್ಲಾ ಸಂಯೋಜಿತ ಕಾಲೇಜುಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು**

**ಪ್ರತಿಗಳು:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀಧಿ, ಬೆಂಗಳೂರು-560 001
2. ಆಯುಕ್ತರು / ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ, ಅರಮನೆ ರಸ್ತೆ, ಬೆಂಗಳೂರು.
3. ಕುಲಸಚಿವರು (ಪರೀಕ್ಷಾಂಗ), ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
4. ಹಣಕಾಸು ಅಧಿಕಾರಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
5. ಮಾನ್ಯ ಕುಲಪತಿಯವರ ಆಪ್ತಕಾರ್ಯದರ್ಶಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
6. ಉಪಕುಲಸಚಿವರು, ಶೈಕ್ಷಣಿಕ ವಿಭಾಗ, ಸಿಬ್ಬಂದಿ ವಿಭಾಗ, ಸಾಮಾನ್ಯ ಮತ್ತು ಅಭಿವೃದ್ಧಿ ವಿಭಾಗ, ಪರೀಕ್ಷಾಂಗ ವಿಭಾಗ, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು.
7. ಸಿಸ್ಟಂ ಅನಾಲಿಸ್ಟ್, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು - ಸದರಿ ವಿಷಯಕ್ಕೆ ಸಂಬAಧಿಸಿದ ಮಾಹಿತಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ತಿಳಿಸಿದೆ.
8. ಕುಲಸಚಿವರು-ದಾವಣಗೆರೆ ವಿಶ್ವವಿದ್ಯಾಲಯ/ ಬೆಂಗಳೂರು ವಿಶ್ವವಿದ್ಯಾಲಯ/ ಮೈಸೂರು ವಿಶ್ವವಿದ್ಯಾಲಯ/ ಮಂಗಳೂರು ವಿಶ್ವವಿದ್ಯಾಲಯ/ ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ/ ಗುಲ್ಬರ್ಗಾ ವಿಶ್ವವಿದ್ಯಾಲಯ/ ಕೃಷ್ಣದೇವರಾಯ ವಿಶ್ವವಿದ್ಯಾಲಯ ಬಳ್ಳಾರಿ/ ರಾಣಿ ಚೆನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ/ ಹಂಪಿ ಕನ್ನಡ ವಿಶ್ವವಿದ್ಯಾಲಯ, ಹಂಪಿ.
9. ಕಚೇರಿ ಪ್ರತಿ.

NAME OF THE UNIVERSITY

**Format for adding new Colleges to Affiliation module**

| Sl.No | Details | |
|---|---|---|
| 1 | Name of the University | |
| 2 | College Name (BLOCK Letter) | |
| 3 | College Type (Govt./ Private/GIA | |
| 4 | District Name | |
| 5 | Taluk Name | |
| 6 | Village/Town | |
| 7 | Pin Code | |
| 8 | Email ID of college/Principal | |
| 9 | Mobile Number of Principal | |
| 10 | Email ID of the College Admin | |
| 11 | Mobile Number of College Admin | |

Date:

Place:

**Sd/-**

**Principal**

**Its request to add above college into Affiliation module and provide login credentials for applying for Affiliation of the year 2024-25.**

Date:

Place:

**Director/Registrar**